
ರತ್ನಜ, ಮೈಸೂರು
ಲಿವಿಂಗ್ ಟುಗೆದರ್‌ನಿಂದ ವಿಚ್ಛೇದನಗಳ ಕೇಸ್‌ಗಳು ಇಲ್ಲವಾಗುವುದಲ್ಲವೆ?



'ಅಹುದಹುದು' ಎಂದವು ಎಂದೂ ಕೋರ್ಟ್ ಕಾಣದ ಕಾಡುಪ್ರಾಣಿಗಳು.

ಬಿ. ಬಸವರಾಜ್, ಹರಿಹರ
ವರವಧು; ಗಂಡಹೆಂಡತಿ; ಇವು ಜೋಡಿ ಪದಗಳೋ, ವಿರುದ್ಧ ಪದಗಳೋ?
ಕತ್ತರಿ, ಕನ್ನಡಕಗಳಂತೆ ಜೋಡಿಯಾಗಿದ್ದೂ ಎಡ ಬಲ ಪಂಥಗಳಿಗೆ ಸೇರಿದಂತಹವು.

ಮಂಡಿ ಕುಮಾರ್, ಬೆಂಗಳೂರು
ಶ್ರೀವೆಂಕಟರಮಣನಿಗೇ ಕೋಟ್ಯಂತರ ಸಾಲ ಕೊಟ್ಟ ಕುಬೇರನ ವಹಿವಾಟೇನು?
ತಮ್ಮನ 'ಸ್ವರ್ಣಮಯೀ ಲಂಕಾ'ದಲ್ಲಿ ಹೋಲ್‌ಸೇಲ್ ಗೋಲ್ಡ್ ಮರ್ಚೆಂಟ್ ಅಂತೆ.

ವಿ. ಹೇಮಂತಕುಮಾರ್, ಬೆಂಗಳೂರು
ನೈದಿಲೆಯ ಮೇಲೆ ಚಂದಿರನು ಮುನಿದರೆ ನೈದಿಲೆಯ ಗತಿ?



'ನಾನೂ ಮುಖ ತೋರಿಸಲ್ಲ ಹೋಗೋಲೇ' ಎನ್ನುತ್ತಾ ದಳಗಳನ್ನು ಮೊಗ್ಗಿಸಿಕೊಳ್ಳುವುದಂತೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಈಗಿನವರು ತಂದೆ, ಗುರುಹಿರಿಯರನ್ನು 'ಹಲೋ' ಎಂದು ಮಾತನಾಡಿಸುವರಲ್ಲ?
ಮುಂದೆ ಅದರಲ್ಲೂ 'ಹ' ಬಿಟ್ಟು ಮಾತನಾಡಿಸುವ ಕಾಲ ಬರುವುದಂತೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ವಯಸ್ಸಾದ ಮೇಲೆ ಹೆರುವುದು ಕಷ್ಟವಂತೆ ನಿಜವೆ?
ಅಷ್ಟೇ ಅಲ್ಲ, ಹೆರರಿಗೂ ಕಷ್ಟ.

ದಿನೇಶ್, ಗುಡ್ಡದೂರು
ನಿಮ್ಮನ್ನು ಹೆಚ್ಚಾಗಿ ಪ್ರಶ್ನಿಸುವವರು ಸ್ವರ್ಗದಲ್ಲಿರುವವರೋ, ನರಕದಲ್ಲಿರುವವರೋ?
ಎರಡರ ಮಿಶ್ರಣವಾದ ನಗರದಲ್ಲಿರುವವರು.

ವಿ. ಮಾಧವ ಶ್ಯಾನುಭಾಗ, ಕುಂದಾಪುರ
ತೊಳೆದ ಪಾತ್ರೆಯಲ್ಲಿ ಅಗುಳು ಉಳಿದಿದ್ದಕ್ಕೆ ಕೆಲಸದವಳಿಗೆ ಬೈದರೆ ದ್ರೌಪದಿಯೂ ಹೀಗೇ ತೊಳೆಯುತ್ತಿದ್ದಳೆಂದಳಲ್ಲ?
ಅದಕ್ಕೇ ಅವಳು ವಿರಾಟನಗರದಲ್ಲಿ ಮೇಯ್ಡ್ ಆಗದೆ ಬ್ಯೂಟಿಷಿಯನ್ ಆಗಿದ್ದು ಎನ್ನಿ.

ದೀಪಕ್ ಶಿರಾಲಿ, ಬೆಂಗಳೂರು
ಕುಡಿಯುವ ಮೊದಲು ಭೂಮಿತಾಯಿಗೆ ಎರಡು ಹನಿ ಎಣ್ಣೆ ಚಿಮುಕಿಸುವುದು ಏಕೆ?
ಈಗ ಮದ್ಯ ಬಿದ್ದಿದೆ; ಕೆಲವೇ ಸಮಯದಲ್ಲಿ ನಾನೂ ಬೀಳುವೆ ಎಂದು ಸೂಚಿಸಲು.

ಕಾವ್ಯಶ್ರೀ, ಶೋರಾಪುರ
ಸ್ವರ್ಗಕ್ಕಿಂತ ಮಿಗಿಲು ಯಾವುದು?
ಸ್ವರ್ಗಸ್ಥರಾಗದೆ ನೆಮ್ಮದಿ, ಆರೋಗ್ಯದಿಂದಿರುವುದು.

ಬಿ. ಚಂದ್ರೇಗೌಡ, ಬೆಂಗಳೂರು
ಬಣ್ಣನೆಗೆ ಸಿಗದ ಬಣ್ಣ ಯಾವುದು?
ಸುಬ್ಬಣ್ಣ!

ಅನಸೂಯ ಟಿ., ಕೇದಿಗೆಮನೆ
ಏರಿದವನು ಕೆಳಗಿಳಿಯಲೇಬೇಕು ಎನ್ನುವ ಗಾದೆಮಾತು ಚಿನ್ನದ ಬೆಲೆಗೆ ಏಕಿಲ್ಲ?
ಇದು ವಿಜ್ಞಾನಿಗಳು ಉಡಾಯಿಸಿದ ಸ್ಯಾಟಿಲೈಟಿನಂತೆ; ಮೇಲೇ ಸುತ್ತುತ್ತಿರುತ್ತದೆ.

ಅಮರಯ್ಯಾ ಪತ್ರಿಮಠ, ಸುರಪುರ
'ಒತ್ತಡ ಮುಕ್ತ' ಬದುಕಿನ ಹಾದಿ ಯಾವುದಯ್ಯಾ?
ಮಂತ್ರಿಯ ಮಗನು ನಡೆಸುವ ಬೇಜವಾಬ್ದಾರಿ ಜೀವನ ಪಥವಯ್ಯಾ.

ಮಹಾವೀರ ಕಾಸರ, ಶಿವಮೊಗ್ಗ
ಗೆದ್ದೆತ್ತಿನ ಬಾಲ ಎಂದರೇನು?
ಸಣ್ಣ ಪಕ್ಷವು ಸಮ್ಮಿಶ್ರಕ್ಕೆಂದು ಹಿಡಿಯಲೆತ್ನಿಸುವ ದೊಡ್ಡ ಪಕ್ಷ.

**ಬಹುಮಾನಿತ ಪ್ರಶ್ನೆ**

ಸುಶೀಲಾ ಎಸ್. ಪಾಟೀಲ, ಸಂಕೇಶ್ವರ
ಮಳೆಗಾಲದಲ್ಲಿ ಬೆಚ್ಚಗಿನ ಪೇಯಗಳು; ಬೇಸಿಗೆಯಲ್ಲಿ ತಂಪು ಪಾನೀಯಗಳು. ಚಳಿಗಾಲದಲ್ಲಿ?
'ಕಾವೇರಿಸುವ ಹಾಟ್ ಡ್ರಿಂಕ್ಸ್' ಎಂದನೊಬ್ಬ ಬಾರ್ ಮಿಕ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಸಂತರು, ಯೋಗಿಗಳು ಧರಿಸುವ ಬಿಳಿ ಉಡುಪಿಗೂ, ರಾಜಕಾರಣಿಗಳ ಬಿಳಿ ಉಡುಪಿಗೂ ವ್ಯತ್ಯಾಸ?
ಅವರದು ವೈದ್ಯವಸ್ತ್ರದ ಬಿಳಿ – ಒಳಿತಿನತ್ತ; ಇವರದು ಶವವಸ್ತ್ರದ ಬಿಳಿ – ಕೆಡುಕಿನತ್ತ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ
ಸುದ್ದಿವಾಹಿನಿಗಳು ಒಂದೇ ಘಟನೆಯನ್ನು ಇಡೀ ದಿನ ಪದೇ ಪದೇ ತೋರಿಸಲು ಕಾರಣ?
'ತೋರಿಸುವಷ್ಟು ಹೊತ್ತೂ ನೋಡುವ ಮೊದ್ದರೇ' ಎಂದನೊಬ್ಬ ವಾಹಿನಿಗ.

ಆಶಾ ಅಪ್ರಮೇಯ, ದಾವಣಗೆರೆ
ಮನುಷ್ಯನೂ ಹಕ್ಕಿಯಂತೆ ಹಾರಾಡುವಂತಿದ್ದಿದ್ದರೆ?



ಉಗ್ರರು ಡ್ರೋನ್ ಬದಲಿಗೆ ತಾವೇ ಬಾಂಬ್ ಕಟ್ಟಿಕೊಂಡು ಹಾರುತ್ತಿದ್ದರು.

ಪಿ. ಜಯವಂತ ಪೈ, ಕುಂದಾಪುರ
ರಂಗನಟನಿಗೂ, ಸಿನಿನಟನಿಗೂ ವ್ಯತ್ಯಾಸವೇನು?
ರಂಗನಟನಿಗೆ ಆಗಲೇ ಪರೀಕ್ಷೆ, ಆಗಲೇ ಫಲಿತಾಂಶ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ದೇವ ಆಮ್ಲಜನಕ ಇದ್ದಂತೆ. ದೇವಿ?
ಅವನನ್ನು ಅಂಕೆಯಲ್ಲಿರಿಸುವ ಆಕ್ಸಿಜನ್ ಸಿಲಿಂಡರ್ ವಾಲ್ವ್.

■ ರಾಮ್